# ಜ್ಞಾನವಂತನಿಗೆ ವಿಧಿ ಕಾಡುವುದು ಸತ್ಯ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 253.
2. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 133.
3. **Note:** This song is not available in another standard book that I refer.
4. **Note:** Lyrics given without highlights are as per Ref. 1. The wordings given in green highlights are as per Ref. 2.
5. **Note:** Singer has followed lyrics as in Ref. 1.

ರಾಗ: ಮುಖಾರಿ ತಾಳ: ಝುಂಪೆ

ಜ್ಞಾನವಂತನಿಗೆ ವಿಧಿ ಕಾಡುವುದು ಸತ್ಯ, ಅ-
ಜ್ಞಾನ ಮೂಢರಿಗೆ ಹರಿತನದ ಬಲವು ‖ ಪ ‖

ಚಂದ್ರನಿಗೆ ವಿಧಿ ಕಾಡಿ ಗ್ರಹಣ ನುಂಗುವದಾಯ್ತು
ಇಂದ್ರನಿಗೆ ವಿಧಿ ಕಾಡಿ ಭಂಗಪಡಿಸಿತು
ಚಂದದಲಿ ಪಾಂಡವರ ವನವಾಸ ಮಾಡಿಸಿತು
ಅಂದು ಲಲನೆ ಸೀತೆಯನ್ನು ಲಂಕೆಯಲಡಗಿಸಿತು ‖ 1 ‖

ಹಿಂದಕ್ಕೆ ಹರಿಶ್ಚಂದ್ರನರಣ್ಯವ ಸೇರಿಸಿತು
ಮಡದ್ಯಾಗಿ ಕಾಡಿತೊ ಕರಿಬಂಟಗೆ
ಕುಂದದೀಶ್ವರನ ಸುಡುಗಾಡ ಸೇರಿಸಿತು
ಇನ್ನು ವಿಧಿಯನ್ನು ನೋಡು ನರರ ಪಾಡೇನು ‖ 2 ‖

ವಿಧಿ ಕಾಡೋ ಕಾಲಕ್ಕೆ ಇಲ್ಲದಪವಾದ ಬಂತು
ಕಲಿಸಿತೋ ಸುಳ್ಳು ಕಳವು ಹಾದರವ
ವಿಧಿಯೊಳಗಾಗದಾ ನರರು ಮತ್ತಿಲ್ಲ
ವಿಧಿ ಗೆದ್ದನೊ ಪುರಂದರ ವಿಠಲ ‖ 3 ‖

**Note:** Below mentioned lyrics in green highlights are as per Ref. 2 above. These lyrics are slightly different.

ರಾಗ: ಕಾಂಬೋದಿ ತಾಳ: ಝಂಪೆ

ಜ್ಞಾನವಂತರಿಗೆ ವಿಧಿ ಕಾಡುವುದು ಸತ್ಯ, ಅ-
ಜ್ಞಾನಿ ಮೂಢರಿಗೆ ಹರಿ ನಿನ್ನ ಬಲವಯ್ಯ || ಪ ||

ಹಿಂದೆ ಹರಿಶ್ಚಂದ್ರನ ಅರಣ್ಯವನೆ ಸೇರಿಸಿತು
ಮುಂದಾಗಿ ಕುಳಿತಿತ್ತು ಕರಿರಾಜಗೆ
ಚಂದದಲಿ ಪಾಂಡವರ ಅರಣ್ಯ ಸೇರಿಸಿತು
ಸುಂದರಿಯ ಸೀತೆಯನು ಲಂಕೆಯೊಳಗಿಟ್ಟಿತು || ೧ ||

ಚಂದ್ರಂಗೆ ವಿಧಿ ಕಾಡಿ ಸರ್ಪ ತಾ ನುಂಗಿತು
ಇಂದ್ರಂಗೆ ವಿಧಿ ಕಾಡಿ ಅಂಗ ಭಗವಾಯಿತು
ಚಂದ್ರಶೇಖರನನ್ನು ಸುಡುಗಾಡ ಸೇರಿಸಿತು
ಇಂದಿದನು ತಿಳಿದರೆ ನರರ ಪಾಡೇನು || ೨ ||

ವಿಧಿ ಕಾಡುವ ಕಾಲಕ್ಕಿಲ್ಲದ್ದೆಲ್ಲವೂ ಬಂತು
ವಿಧಿ ಕಳವು ಹಾದರ ಕಲಿಸಿತು
ವಿಧಿ ಬೇನೆ ಚಳಿಯುರಿಯ ರೋಗಂಗಳನೆ ತಂತು
ವಿಧಿಯ ಗೆದ್ದವ ನಮ್ಮ ಪುರಂದರ ವಿಠ್ಠಲ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಇಲ್ಲಿ ದಾಸರು ಸಂಸಾರಾರ್ತನಿಗೆ ಭಕ್ತಿಯ ಮೂಲಕ ಕ್ರಮವಾಗಿ ಬರುವ ಒಂದು ಬಗೆಯ ವಿವೇಕವನ್ನು ಕುರಿತು ವಿವರಿಸಿದ್ದಾರೆ.

**೧. ಹರಿಶ್ಚಂದ್ರ : -** ಅಯೋಧ್ಯೆಯ ಅರಸನಾದ ಸತ್ಯವ್ರತನ ಮಗ. ಇವನ ಹೆಂಡತಿ ತಾರಾಮತಿ. ಮಗ ರೋಹಿತ. ಹರಿಶ್ಚಂದ್ರನು ಸತ್ಯ ಪರೀಕ್ಷೆಗಾಯಾಗಿ ವಿಶ್ವಾಮಿತ್ರನ ಪ್ರಯೋಗಕ್ಕೆ ಒಳಪಟ್ಟು ಅನೇಕ ಕಷ್ಟಗಳನ್ನು ಅನುಭವಿಸಿದ.

**೨. ಚಂದ್ರಂಗೆ ........... ನುಂಗಿತು : -** ರಾಹು, ಕಶ್ಯಪ ಮತ್ತು ಸಿಂಹಿಕೆಯರ ಮಗ. ನವಗ್ರಹಗಳಲ್ಲಿ ಎಂಟನೆಯವ. ಇವನು ಸರ್ಪರೂಪಿ ಎಂಬುದು ಸಾಪ್ರದಾಯಿಕ ಕಲ್ಪನೆ. ಸಮುದ್ರ ಮಂಥನ ಕಾಲದಲ್ಲಿ ದೇವತೆಗಳೊಡನೆ ಈತನು ಅಮೃತವನ್ನು ಉಣ್ಣಲಿಕ್ಕೆ ಕುಳಿತಿದ್ದನು. ಸೂರ್ಯ ಚಂದ್ರರು ಇವನು ರಾಕ್ಷಸನೆಂಬುದನ್ನು ತಿಳಿದು ಶ್ರೀಹರಿಗೆ ತಿಳಿಸಲು ಅವನು ಚಕ್ರದಿಂದ ಇವನ ತಲೆ ಉರುಳಿಸಿದನು. ತಲೆಯ ಭಾಗ ಕೇತುವಾಯಿತು, ದಡವು ರಾಹುವಾಯಿತು. ಇವರು ಸೂರ್ಯ ಚಂದ್ರರ ವೈರಿಗಳಾಗಿದ್ದಾರೆ. ಗ್ರಹಣಕ್ಕೆ ಇವರೇ ಕಾರಣರೆಂಬುದು ನಮ್ಮ ನಂಬಿಗೆ.

**೩. ಇಂದ್ರ : -** ಕಶ್ಯಪ ಅದಿತಿಯರ ಮಗ. ದೇವಲೋಕದ ಅಧಿಪತಿ. ಗೌತಮನ ಸತಿ ಅಹಲ್ಯೆಯ ಪಾತಿವ್ರತ್ಯವನ್ನು ಭಂಗಗೊಳಿಸಿ ಶಾಪಕ್ಕೊಳಗಾಗಿ ಸಹಸ್ರಾಕ್ಷನಾದನು.

**Classification:** Keerthane
**Ankita:** purandara vittala
**Location:** NA
**Category:** Artha Bhava, Vidhi Chintane
**Sub-Category:** jnana, satya, vidhi, krishna, pandava, Chandra, indra, kaadu, sita, lanka, Harishchandra, shiva, sullu, nara,
**Pravachana:** NA
**Explanation:** NA